NAGARJUNA
COLLEGE OF ENGINEERING & TECHNOLOGY

Two research proposals from Nagarjuna College of Engineering and Technology (NCET) have been selected for funding under the prestigious Vision Group on Science and Technology (VGST), Government of Karnataka Research Grant Schemes for the academic year 2023–24.

**K-FIST Level 1 Grant – ₹20.00 Lakhs**

**Project Title: Nanostructuring of Metals and Alloys for Structural and Functional Applications**

**Principal Investigators:**

**Dr. Mahesh K. K., Professor, Department of Physics**

**Dr. Mahesh Shastri, Assistant Professor, Department of Electronics and Communication Engineering**

**Funding Scheme: K-FIST Level 1**

**Sanctioned Amount: ₹20,00,000**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಕೊಠಡಿ ಸಂಖ್ಯೆ: 507, 5ನೇ ಮಹಡಿ, 5ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001.
ದೂರವಾಣಿ/ಫ್ಯಾಕ್ಸ್ : 080-26711166; ಇಮೇಲ್: ksteps.dst@gmail.com

ಸಂಖ್ಯೆ: ಕೆಸ್ಟೆಪ್ಸ್/ ವಿತಂದಾಸ /K-FIST L1/GRD No. 1225/2023-24/85 ದಿನಾಂಕ: 16ನೇ ಮೇ, 2025

ಇವರಿಗೆ:

Dr. Mahesh K. K
Professor
Department of Physics
Nagarjuna College of Engineering and Technology
Mudugurki, Post: Venkatagiri Kote, Devanahalli
Bengaluru Rural - 562 164

ಮಾನ್ಯರೇ,

ವಿಷಯ: 2023-24ನೇ ಸಾಲಿನ ವಿತಂದಾಸದ K-FIST L1 ಯೋಜನೆಯಡಿ ತಮ್ಮ ಪ್ರಸ್ತಾವನೆ ಆಯ್ಕೆಯಾಗಿರುವ ಬಗ್ಗೆ

ಉಲ್ಲೇಖ: 1. ವಿತಂದಾಸ ಅರ್ಜಿ ಆಹ್ವಾನ ಜಾಹೀರಾತು ಸಂಖ್ಯೆ: DST/KSTePS/VGST/2023-24 ದಿನಾಂಕ: 16.03.2024
2. ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಟಿ 99 ಎಸ್ ಟಿ ಎಸ್ 2025, ಬೆಂಗಳೂರು, ದಿನಾಂಕ: 07.05.2025

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಭಾರತ ರತ್ನ ಪ್ರೊ|| ಸಿ.ಎನ್.ಆರ್. ರಾವ್, ಎಫ್.ಆರ್.ಎಸ್., ರವರ ಅಧ್ಯಕ್ಷತೆಯಡಿ ರಚಿಸಲಾಗಿರುವ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ (ವಿತಂದಾಸ) ಶಿಫಾರಸ್ಸಿನ ಆಧಾರದ ಮೇಲೆ 2023-24ನೇ ಸಾಲಿನ ವಿತಂದಾಸದ ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಸೌಕರ್ಯಾಭಿವೃದ್ಧಿಗೆ ನಿಧಿ (Karnataka Fund for Infrastructure Strengthening in Science & Technology Level 1 - K-FIST L1) ಯೋಜನೆಯಡಿ ತಾವು ಸಲ್ಲಿಸಿದ್ದ "**Nanostructuring of metals and alloys for structural and functional applications**" ಶೀರ್ಷಿಕೆಯ ಪ್ರಸ್ತಾವನೆಯು ಆಯ್ಕೆಗೊಂಡು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ವಿತಂದಾಸದ ವಿವಿಧ ಯೋಜನೆಗಳಡಿ ಆಯ್ಕೆಯಾದ ಪ್ರಸ್ತಾವನೆಗೆ ಸರ್ಕಾರದಿಂದ ಒದಗಿಸಲಾಗುವ ಅನುದಾನದ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.

ಈ ನಿಟ್ಟಿನಲ್ಲಿ, ಈ ಕೆಳಕಂಡ ದಾಖಲೆಗಳನ್ನು ವಿತಂದಾಸ ಕಛೇರಿಗೆ (ನಂ: 702, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು-560001) ಸಲ್ಲಿಸಲು ಸೂಚಿಸಿದೆ:

1. PPMS ನಲ್ಲಿ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರದ ಸಹಿಯಿರುವ ಕೆಳಕಂಡ ದಾಖಲೆಗಳು:
   - ಪ್ರಸ್ತಾವನೆಯ ಮೂಲ ಪ್ರತಿ – **2 ಪ್ರತಿಗಳು**
   - Part-A ದಾಖಲೆಯ ಮೂಲ ಪ್ರತಿ
   - Undertaking letter ಮತ್ತು ಸಂಸ್ಥೆಯಿಂದ ನೀಡಲಾಗಿರುವ Endorsement Letter ನ ಮೂಲ ಪ್ರತಿಗಳು ಮತ್ತು ನಕಲು ಪ್ರತಿ
   - ಸಂಸ್ಥೆಯಿಂದ ಹಣಕಾಸು ಬೆಂಬಲವಿದ್ದಲ್ಲಿ ಬೆಂಬಲ ಪತ್ರ (Institutional Financial Support letter) - ಪ್ರಸ್ತಾವನೆಯಲ್ಲಿ ನಮೂದಿಸಿದಂತೆ
   - ಸಹಯೋಗದ ಪತ್ರ (Letter of Collaboration) - ಪ್ರಸ್ತಾವನೆಯಲ್ಲಿ ನಮೂದಿಸಿದ್ದಲ್ಲಿ
   - ಯೋಜನಾ ಸಂಯೋಜಕರ (PI) ಮತ್ತು ಸಹ ಸಂಯೋಜಕರ (Co-PI) ಸಂಶೋಧನಾ ಲೇಖನಗಳ (Publications) ಪ್ರತಿ, CV, ಅನುಭವ ಪ್ರಮಾಣ ಪತ್ರ, ಎಂ.ಟೆಕ್./ಎಮ್.ಇ, ಪಿ.ಹೆಚ್.ಡಿ. ಪ್ರಮಾಣ ಪತ್ರ, ಪ್ಯಾನ್ ಕಾರ್ಡ್ ನಕಲು ಪ್ರತಿ, ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳು

2. ಅಫಿಡವಿಟ್ ನಲ್ಲಿ **(ಅನುಬಂಧ-2)** ನೀಡಲಾಗಿರುವ ನಮೂನೆಯಲ್ಲಿನ ಮಾಹಿತಿಯನ್ನು ರೂ. 100/- ರ ಛಾಪಾ ಕಾಗದದ ಮೇಲೆ ನೀಡತಕ್ಕದ್ದು [ಮೊದಲನೇ ಕಕ್ಷಿದಾರ (1st Party): ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರು ಮತ್ತು ಸಂಸ್ಥೆಯ ಹೆಸರು, ಎರಡನೇಯ ಕಕ್ಷಿದಾರ (2nd Party): ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್)].

3. ಸಂಸ್ಥೆಯ ಮುಖ್ಯಸ್ಥರ ಲೆಟರ್ ಹೆಡ್ ನಲ್ಲಿ ಅನುದಾನ ಬಿಡುಗಡೆಗೆ ಸಂಸ್ಥೆಯ ಬ್ಯಾಂಕ್ ನ ಉಳಿತಾಯ ಖಾತೆಯ ಕೆಳಕಂಡ ವಿವರ ಹಾಗೂ ಪಾಸ್ ಪುಸ್ತಕದ ಸದರಿ ವಿವರವುಳ್ಳ ಪುಟದ ನಕಲು ಪ್ರತಿ (ಸಂಸ್ಥೆಯ ಮುಖ್ಯಸ್ಥರ ಖಾತೆಯ ವಿವರವನ್ನು ಮಾತ್ರ ನೀಡತಕ್ಕದ್ದು):

ಖಾತೆಯ ಹೆಸರು:
ಖಾತೆಯ ಸಂಖ್ಯೆ:
ಬ್ಯಾಂಕ್ ನ ಹೆಸರು ಮತ್ತು ಶಾಖೆ:
IFSC ಸಂಖ್ಯೆ:

ಮುಂದುವರಿದು, ತಮ್ಮ ಯೋಜನೆಯ ಅನುದಾನ ಸಂಬಂಧಿತ ದಾಖಲೆ (Grant Related Document) **ಜಿ. ಆರ್. ಡಿ. ಸಂಖ್ಯೆ.1225** ಆಗಿದ್ದು, ವಿತಂದಾಸ/ಕೆಸ್ಟೆಪ್ಸ್ ಜೊತೆ ನಡೆಸಲಾಗುವ ಮುಂದಿನ ಎಲ್ಲಾ ಪತ್ರ ವ್ಯವಹಾರಗಳಿಗೆ ಈ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಸೂಚಿಸಿದೆ.

**ಈ ಎಲ್ಲಾ ದಾಖಲೆಗಳನ್ನು ದಿನಾಂಕ: 31ನೇ ಮೇ, 2025 ರೊಳಗಾಗಿ ವಿತಂದಾಸ ಕಛೇರಿಗೆ ತಪ್ಪದೇ ಸಲ್ಲಿಸಲು ಕೋರಲಾಗಿದೆ.** ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-2203-2013/ ಇಮೇಲ್: visiongroup.st@gmail.com ಅನ್ನು ಸಂಪರ್ಕಿಸಬಹುದಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

Digitally signed by
B SADASHIVA PRABHU
Date: 17-05-2025
11:03:24

(ಸದಾಶಿವ ಪ್ರಭು ಬಿ., ಭಾ.ಆ.ಸೇ.)
ನಿರ್ದೇಶಕರು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/
ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್

**ಪ್ರತಿ:**

1. The Principal, Nagarjuna College of Engineering and Technology, Mudugurki, Post: Venkatagiri Kote, Devanahalli, Bengaluru Rural - 562 164
2. Dr. Mahesh Shastri, Assistant Professor (Co-PI), Department of Electronics and Communication Engineering, Nagarjuna College of Engineering and Technology, Mudugurki, Post: Venkatagiri Kote, Devanahalli, Bengaluru Rural - 562 164
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕೊಠಡಿ ಸಂಖ್ಯೆ: 305, 5ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು – 560 001
4. ಕಛೇರಿ ಪ್ರತಿ